ದಯಮಾಡಿ ಎಲ್ಲಾ ಇಲಾಖೆಗಳಿಗೆ ಗಮನ ಹರಿಸಿ ಸಂಬಂಧಪಟ್ಟವರಿಗೆ ಸಹಾಯ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಸುಮಾರು 40ರಿಂದ 50 ಹಳ್ಳಿಗಳು ಇದರಲ್ಲಿ ಬರುತ್ತವೆ. ಈ ದಿಕ್ಕಿನಲ್ಲಿ ಅನಿವಾರ್ಯತೆ ಇದೆ, ಬಹಳ ತೊಂದರೆ ಇದೆ, ನನ್ನ ಕ್ಷೇತ್ರದಲ್ಲಿ ರೈತರಿಗೆ ಉಂಟಾಗಿರತಕ್ಕ ಈ ತೊಂದರೆ ಕಡೆಗೆ ನಮ್ಮ ಸರ್ಕಾರ ಕೂಡಲೇ ಗಮನ ಕೊಡಬೇಕೆಂದು ನಿಮ್ಮ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಕಂದಾಯ ಸಚಿವರು ಹೇಳಿದ್ದಾರೆ. ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ವರದಿ ತರಿಸಿ ನಾವು ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆಂದು, ಅವರು ಏನು ಹೇಳಿದ್ದಾರೆ, ಅದೇ ಕ್ರಮವನ್ನು ಇದಕ್ಕೂ ಕೂಡ ಅನ್ವಯವಾಗುತ್ತದೆ.

ಟ) ರಾಜ್ಯದಲ್ಲಿ ಖಾಸಗಿ ಹಣಕಾಸಿನ ಸಂಸ್ಥೆಗಳ ಠೇವಣಿ ವಸೂಲಿ ಮಾಡುತ್ತಿರುವುದು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಬೆಂಗಳೂರು ಸೇರಿದಂತೆ ಕರ್ನಾಟಕ ರಾಜ್ಯದ ಅನೇಕ ಮೂಲೆಗಳಲ್ಲಿ ಹಣಕಾಸಿನ ಸಂಸ್ಥೆಗಳು ಠೇವಣಿ ವಸೂಲಿ ಮಾಡುವುದಕ್ಕೆ ಈ ಖಾಸಗಿ ಹಣಕಾಸಿನ ಸಂಸ್ಥೆಗಳು ತಲೆ ಎತ್ತುತ್ತಿವೆ. ಇದರಿಂದ ಏನಾಗಿದೆ ಎಂದರೆ ಬಡವರು, ಜನಸಾಮಾನ್ಯರು ನೂರಾರು ಜನ ನಾನಾ ವರ್ಗದ ಜನರು ಇದರಲ್ಲಿ ಠೇವಣಿ ಇಡುವುದಕ್ಕೆ ಒಂದು ರೀತಿ ಆಕರ್ಷಣೆ ಮಾಡುತ್ತಾರೆ. ಬೇರೆ ಬೇರೆ ರೀತಿ ಬಹುಮಾನ ಕೊಡುತ್ತೇವೆಂದು, ಕಾರ್ ಕೊಡುತ್ತೇವೆ, ಸ್ಕೂಟರ್ ಕೊಡುತ್ತೇವೆ, ಎಂದು ನೂರೆಂಟು ತರಹ ಆಕರ್ಷಣೆ ಮಾಡಿ ನಿವೃತ್ತ ಅಧಿಕಾರಿಗಳು, ವಕೀಲರು ರೈತರು ನಾನಾ ವರ್ಗದ ಜನ ಹಣ ಇಲ್ಲಿ ಠೇವಣಿ ಇಡುತ್ತಾರೆ. ಠೇವಣಿ ಇಟ್ಟು ನಂತರ ಒಂದಾದ ಮೇಲೆ ಒಂದರಂತೆ ಸಂಪೂರ್ಣವಾಗಿ ಆ ಕಂಪನಿ ಮುಚ್ಚಿ ಈ ತರಹದ ಕಂಪನಿಗಳು ಬೆಂಗಳೂರಿನಲ್ಲಿ ನೂರಾರು ಇವೆ. ಮೈಸೂರಿನಲ್ಲಿ ಮುಚ್ಚಿವೆ. ಇಡೀ ಕರ್ನಾಟಕ ರಾಜ್ಯದ್ಯಂತ ಈ ತರಹ ನಡೆದಿದೆ. ಹಣ ಇಟ್ಟವರಿಗೆ ಕೊನೆಗೆ ಏನಾಯಿತು ಎಂದರೆ, ಹಣ ಅಲ್ಲಿ ಇರುತ್ತದೆ ಎಂದು ತಿಳಿದುಕೊಂಡಿರುತ್ತಾರೆ. ಆದರೆ ಅವನು ಪತ್ತೆನೇ ಇರುವುದಿಲ್ಲ. ಎಲ್ಲಿ ಹೋಗಿರುತ್ತಾನೆ ಗೊತ್ತಿರುವುದಿಲ್ಲ ಈ ರೀತಿ ಹಣ ಇಟ್ಟು ಮೋಸ ಮಾಡಿದವರ ಹೆಸರು ಹೇಳುವುದಾದರೆ ಉದಾಹರಣೆಗೆ ಈಶ್ವರಿ ಫೈನಾನ್ಸ್ ಇದು ರಾಜಾಜಿನಗರದಲ್ಲಿರುವ ಹಣಕಾಸು ಸಂಸ್ಥೆ. ಸುಮಾರು 500 ಕೋಟಿ ರೂ ಬಂಡವಾಳದಿಂದ ಆರಂಭವಾದ ಒಂದು ದೊಡ್ಡ ಸಂಸ್ಥೆ. ಆ ಸಂಸ್ಥೆ ಆರಂಭಕ್ಕೆ ಭಾರೀ ವೈಭವದಿಂದ ಸಿನಿಮಾ ನಟರೆಲ್ಲರನ್ನೂ ಕರೆಸಿ ಆಕರ್ಷಣೆ ಮಾಡಿ ಮಾಡಿದ್ದರು. ಈಗ ಅದು ಮುಚ್ಚಿದೆ. ಅದರ ಮಾಲೀಕ ಮ್ಯಾನೇಜಿಂಗ್ ಡೈರೆಕ್ಟರ್ ಜ್ಯೋತಿ ವೇಲು ಎಂದು ಅವನು ತಪ್ಪಿಸಿಕೊಂಡು ತಮಿಳುನಾಡಿಗೆ ಓಡಿ ಹೋದ. ಅವನಿಗೆ ಹಣ ವಸೂಲಿ ಮಾಡುವವರು ನಾಲ್ಕು ಜನ ಅಮಾಯಕರು ತೊಂದರೆಗೆ ಸಿಕ್ಕಿಕೊಂಡಿದ್ದಾರೆ. ಇಂಥ ಪರಿಸ್ಥಿತಿ ಎಲ್ಲಾ ಕಡೆ ಇದೆ. ಮೋಸ, ವಂಚನೆ ನಡೆಯುತ್ತಿದೆ. ಇದಕ್ಕಾಗಿ ಈಗ

ತಮಿಳುನಾಡಿನಲ್ಲಿ ಏನು ಕಾನೂನು ತಂದಿದ್ದಾರೆ ಎಂದರೆ ಠೇವಣಿ ತೆಗೆದುಕೊಂಡು ಮೋಸ ಮಾಡತಕ್ಕಂಥವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ವಿಶೇಷ ನ್ಯಾಯಾಲಯ ಸ್ಥಾಪನೆ ಮಾಡಿ ನ್ಯಾಯಾಲಯದ ಮುಂದೆ ಇವರನ್ನು ಮಂಡಿಸಬೇಕು, ಮೊಕದ್ದಮೆ ದಾಖಲು ಮಾಡಬೇಕು ಎಂದು ಮಾಡಿದ್ದಾರೆ. ಆ ಕಾನೂನು ತಮಿಳುನಾಡಿಗೆ ಮಾತ್ರ ಸೀಮಿತವಾಗಿಯೇ ಹೊರತು ಕರ್ನಾಟಕಕ್ಕೆ ಬರಲಿಲ್ಲ, ಬೇರೆ ಕಡೆ ಬರಲಿಲ್ಲ. ಚಿದಂಬರಂ ಅವರು ಆ ಕಾಲದಲ್ಲಿ ಸುಗ್ರೀವಾಜ್ಞೆ ಮೂಲಕ ಅದನ್ನು ಜಾರಿಗೆ ತಂದರು. ಕರ್ನಾಟಕದಲ್ಲಿ ಆಗಿರತಕ್ಕಂಥದ್ದು ಇವರು ಯಾರೂ ಹೋಗಿ ಅಲ್ಲಿ ಕಂಪ್ಲೇಂಟ್ ಕೊಡುವುದಕ್ಕೆ ಬರುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಈ ರೀತಿಯಾದ ಪಿಡುಗನ್ನು ತಪ್ಪಿಸುವುದಕ್ಕೆ ವಿಶೇಷ ನ್ಯಾಯಾಲಯ ಇದ್ದರೆ ತರುವುದು ಇದು ಒಂದು, ಇನ್ನು ಹಣಕಾಸಿನ ಸಚಿವರು ಈ ರೋಗವನ್ನು ತಪ್ಪಿಸುವುದಕ್ಕೆ ಪರಿಣಾಮಕಾರಿಯಾದ ಕ್ರಮ ಕೈಗೊಳ್ಳಬೇಕು. ಈಶ್ವರಿ ಫೈನಾನ್ಸ್‌ನಲ್ಲಿ ಠೇವಣಿ ಇಟ್ಟಿರುವವರು ಪೋಲೀಸ್ ಸ್ಟೇಷನ್‌ಗೆ ಅನೇಕ ಸಾರಿ ಕಂಪ್ಲೇಂಟ್ ಕೊಟ್ಟಿದ್ದಾರೆ. ಆದರೂ ಅವನನ್ನು ಬಂಧಿಸಲಿಲ್ಲ. ಅವನು ತಮಿಳುನಾಡಿಗೆ ಹೊರಟು ಹೋಗಿದ್ದಾನೆ. ಈ ರೀತಿಯಾಗಿರತಕ್ಕಂಥ ಅಮಾಯಕರು ಮೋಸಕ್ಕೆ ಒಳಗಾಗುತ್ತಿದ್ದಾರೆ. ಆದುದರಿಂದ ಕರ್ನಾಟಕ ಸರ್ಕಾರ ಈ ಬಗ್ಗೆ ತೀವ್ರವಾಗಿ ಗಮನ ಹರಿಸಿ ಇದಕ್ಕೆ ವಿಶೇಷ ಕಾಯಿದೆಯನ್ನು ತರಬೇಕು. ಈಗ ಏನು ಅಮಾಯಕರು ಮೋಸಕ್ಕೆ ಒಳಗಾಗಿದ್ದಾರೆ ಅವರಿಗೆ ನ್ಯಾಯವನ್ನು ದೊರಕಿಸಿಕೊಡುವುದಕ್ಕೆ ಸುಗ್ರೀವಾಜ್ಞೆಯನ್ನು ತರಬೇಕು. ಇದಕ್ಕಾಗಿ ಮಸೂದೆಯನ್ನು ತರಲು ಸಭೆಯ ಮುಂದೆ ಬರಬೇಕು. ಇದಕ್ಕೆ ವಿಶೇಷವಾದ ನ್ಯಾಯಾಲಯವನ್ನು ಮಾಡಬೇಕು. ಕೇವಲ ಜ್ಯೋತಿವೇಲು ಎನ್ನತಕ್ಕಂಥ ಒಬ್ಬ ವ್ಯಕ್ತಿಯೇ ಸುಮಾರು 5 ಕೋಟಿ ರೂ.ಗಳನ್ನು ಜನರಿಗೆ ವಂಚಿಸಿದ್ದಾನೆ, ಇಂಥ ಹಲವಾರು ಹಣಕಾಸಿನ ಸಂಸ್ಥೆಗಳು ಇಂದು ಅದೇ ನಿಟ್ಟಿನಲ್ಲಿವೆ, ತಮಗೂ ಗೊತ್ತಿರಬಹುದು ಮೈಸೂರಿನಲ್ಲಿ ವಂಚಿಸಿದ ಹಣಕಾಸಿನ ಸಂಸ್ಥೆ ಬಗ್ಗೆ. ಇವರು ಅನೇಕ ಆಕರ್ಷಣೀಯವಾದ ಯೋಜನೆಗಳನ್ನು ಹಾಕುವ ಮೂಲಕ ಅಂದರೆ ಕಾರು ಕೊಡುತ್ತೇವೆಂದು ಮತ್ತು ಇನ್ನಿತರ ಬಹುಮಾನಗಳನ್ನು ಕೊಡುವ ಆಮಿಷವನ್ನು ತೋರಿಸಿ ವಂಚಿಸುತ್ತಿದ್ದಾರೆ. ಇದಲ್ಲದೇ ಬಡ ಜನರು ಪಾಪ ಇವರ ವಂಚನೆಗೆ ಒಳಗಾಗುತ್ತಿದ್ದಾರೆ. ಸಾಮಾನ್ಯವಾಗಿ ಇಂಥ ಸಂಸ್ಥೆಗಳು ಶೇಕಡ 25ರಿಂದ 30 ಡಿಪಾಸಿಟ್ ಮೇಲೆ ಬಡ್ಡಿ ಕೊಡುತ್ತೇವೆಂದು ಹೇಳಿದಾಗ ಬಡಜನರು ನಂಬಿ ತಮ್ಮ ಹಣವನ್ನು ಡಿಪಾಸಿಟ್ ಮಾಡುತ್ತಾರೆ. ಆದ ಕಾರಣ ಇಂಥ ವಂಚನೆಯನ್ನು ತಡೆಗಟ್ಟುವ ಸಲುವಾಗಿ ಇದರ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು. ಕಾಯಿದೆ ತರಬೇಕು. ಈ ಜ್ಯೋತಿವೇಲು ಏನಿದ್ದಾನೆ, ಅವನ ಬಗ್ಗೆ ತಮಿಳುನಾಡು ಸರ್ಕಾರದ ಜೊತೆ ಮಾತುಕತೆ ಮಾಡಿ ಆತನನ್ನು ಕರ್ನಾಟಕಕ್ಕೆ ತಂದು ಬಂಧಿಸಿ ಹಣವನ್ನು ವಸೂಲು ಮಾಡಬೇಕು. ಸಿ.ಬಿ.ಐ ಅಥವಾ ಸಿ.ಒ.ಡಿ ಎನ್‌ಕ್ವೈರಿ ಮಾಡಬೇಕು. ಇದರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಿ ಯಾರು ಅಮಾಯಕರು ನೊಂದಿದ್ದಾರೆ ಅವರಿಗೆ ನ್ಯಾಯ ದೊರಕಿಸಿಕೊಡಬೇಕು. ಮಾನ್ಯ ಹಣಕಾಸಿನ ಸಚಿವರಿಗೂ ಇದರ ಬಗ್ಗೆ ಚೆನ್ನಾಗಿ ಗೊತ್ತಿದೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಹಿಂದೆ ಅನೇಕ ಸಂದರ್ಭಗಳಲ್ಲಿ ಚರ್ಚೆಯಾಗಿದೆ. ಅವರು ಮಾತನಾಡುತ್ತಾ ತಮಿಳುನಾಡಿನಲ್ಲಿ ಇದನ್ನು ನಿಯಂತ್ರಿಸಲು ಕಾಯಿದೆ ಇದೆ ಎಂದು ಹೇಳಿದ್ದಾರೆ. ಅಮಾಯಕ ಜನರಿಗೆ ಮೋಸ ಮಾಡತಕ್ಕಂಥ ಹಣಕಾಸಿನ ಬ್ಲೇಡ್ ಕಂಪನಿಗಳನ್ನು ತೆರೆದು ಜನರಿಗೆ ಮೋಸ ಮಾಡತಕ್ಕಂಥ ಕೃತ್ಯಗಳು ನಡೆಯುತ್ತಿವೆ. ಆದಕಾರಣ ಇಂಥ ಜನರಿಗೆ ಕಾನೂನಿನ ಮೂಲಕ ಯಾವ ರೀತಿಯಲ್ಲಿ ರಕ್ಷಣೆ ಮಾಡಬಹುದು ಎಂಬ ಬಗ್ಗೆ ಸರ್ಕಾರ ಗಂಭೀರವಾಗಿ ವಿಚಾರ ಮಾಡುತ್ತಿದೆ.

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ): ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಉಪಮುಖ್ಯಮಂತ್ರಿಯವರ ಮನೆಗೆ ಒಂದು ಡೆಲಿಗೇಷನ್ ಜೊತೆಗೆ ಹೋಗಿ ಚೆನ್ನೈನಲ್ಲಿ ಇಂಥ ಬ್ಲೇಡ್ ಕಂಪನಿಗಳನ್ನು ಮಟ್ಟ ಹಾಕಲು ತಮಿಳುನಾಡು ಸರ್ಕಾರ ಏನು ಬಿಲ್ ಮಾಡಿದೆ ಅದರ ಕಾಪಿಯನ್ನು ಉಪ ಮುಖ್ಯಮಂತ್ರಿಗಳಿಗೆ ನಾನೇ ಕೊಟ್ಟಾಗ ಅವರು ಇದಕ್ಕೆ ಒಂದು ಕಾಂಪ್ರಹೆನ್ಸೀವ್ ಬಿಲ್ ತಂದು ಈಗ ಏನು ಹಣಕಾಸಿನ ಬ್ಲೇಡ್ ಕಂಪನಿಗಳು ಲೂಟಿ ಹೊಡೆಯುತ್ತಿದ್ದಾರೆ ಅಂಥವುಗಳಿಗೆ ಇತಿಶ್ರೀ ಹಾಡಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು. ಇದನ್ನು ಅವರು ಒಂದೂವರೆ ವರ್ಷಗಳ ಹಿಂದೆಯೇ ಹೇಳಿದ್ದರು. ಆದರೆ ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ. ನಮ್ಮ ಈಶ್ವರಪ್ಪನವರು ಸರ್ಕಾರದ ಬಗ್ಗೆ ಒಂದು ಮಾತನ್ನು ಹೇಳಿದಾಗ ನೀವು ಕೋಪ ಮಾಡಿಕೊಂಡಿರಿ. ಈಗಾಗಲೇ ಒಂದೂವರೆ ವರ್ಷವಾಗಿದ್ದರೂ ಕೂಡ ಒಂದು ಬಿಲ್ ತರುವುದಕ್ಕೆ ಸರ್ಕಾರಕ್ಕೆ ಆಗದಿದ್ದರೆ ಇಂಥ ಸರ್ಕಾರದ ಬಗ್ಗೆ ನಾನು ಏನು ಹೇಳಬೇಕು.

ಶ್ರೀ ಸಿದ್ಧರಾಮಯ್ಯ: ನೀವು ಹೇಳಿದ ಮೇಲೆ ಅದರ ಬಗ್ಗೆ ಪರಿಶೀಲನೆ ಮಾಡಲು ಕಾನೂನು ಇಲಾಖೆಗೆ ಕಳುಹಿಸಿದ್ದೇವೆ. ಯಾವುದೇ ಬಿಲ್ ತರಬೇಕಾದರೆ ಅವರಿಂದ ಪರಿಶೀಲನೆಯಾದ ನಂತರ ಅದು ಅಸೆಂಬ್ಲಿಗೆ ಬರಬೇಕು. ಅದು ಬಂದ ತಕ್ಷಣ ಕ್ರಮ ತೆಗೆದುಕೊಳ್ಳಲು ಪರಿಶೀಲಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಆ ಕೆಲಸವನ್ನು ನೀವು ಮೊದಲು ಮಾಡಿ. ಜನರು ನಿಮ್ಮನ್ನು ಮೆಚ್ಚುತ್ತಾರೆ.

ಶ್ರೀ ಸಿದ್ಧರಾಮಯ್ಯ: ಅದನ್ನು ಆದಷ್ಟು ಬೇಗ ಮಾಡುತ್ತೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ): ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನನ್ನದೊಂದು ಸಲಹೆ ಇದೆ. ಮೊನ್ನೆ ರಜಾ ಬಂದಾಗ ಜಸ್ಟೀಸ್ ಠಾಕೂರ್‌ರವರ ಮುಂದೆ ಇದರ ಬಗ್ಗೆ ಬಹಳ ಮಹತ್ವಪೂರಿತವಾದ ಜಡ್ಜ್‌ಮೆಂಟ್ ಬಂದಿದೆ. ಹಣವನ್ನು ಡಿಪಾಸಿಟ್ ಯಾರು ತೆಗೆದುಕೊಳ್ಳುತ್ತಾರೆ ಅದರ ಬಗ್ಗೆ ಜಡ್ಜ್‌ಮೆಂಟ್ ಆಗಿರುವುದು

ಬಂದಿದೆ. ಆದರೆ ಇನ್ನೂ ಜಡ್ಜ್‌ಮೆಂಟ್ ಹೊರಗಡೆ ಬಂದಿಲ್ಲ. ದಯವಿಟ್ಟು ಅದನ್ನು ತರಿಸಿಕೊಂಡು ನೋಡಿ. ಸಾಮಾನ್ಯ ಕಾನೂನಿನಲ್ಲಿ ಚೀಟಿಂಗ್ ಆಗುತ್ತದೆ. ಈಗಾಗಲೇ ನೀವು ಎಕನಾಮಿಕ್ ಕೋರ್ಟ್ ಮಾಡಿದ್ದೀರಿ. ಎಕನಾಮಿಕ್ ಅಫೆನ್ಸ್‌ಗಳಿಗೆ ಸಂಬಂಧಪಟ್ಟಂತೆ ಸೆಪರೇಟ್ ಮ್ಯಾಜಿಸ್ಟ್ರೇಟ್ ಇದ್ದಾರೆ. ಈ ಮ್ಯಾಜಿಸ್ಟ್ರೇಟ್‌ಗೆ ಈ ಕಾನೂನಿನಲ್ಲಿ ಇಂಥವರನ್ನು ಕೊಡುವುದಕ್ಕೆ ಸಾಧ್ಯವಾದರೆ ಕಳುಹಿಸಿಕೊಡಬಹುದು. ಇದಕ್ಕೆ ಸೆಪರೇಟ್ ಕಾನೂನು ಬೇಕು ಎಂದೇನೂ ಇಲ್ಲ. ಈಗಾಗಲೇ ಕರ್ನಾಟಕದಲ್ಲಿ ಎಕನಾಮಿಕ್ ಅಫೆನ್ಸ್‌ಗಳಿಗೆ ಬೇರೆ ಜಡ್ಜ್‌ಗಳನ್ನು ಮಾಡಿದ್ದಾರೆ. ಅವರ ಮುಂದೆ ಇಂಥ ಅಫೆನ್ಸ್‌ಗಳು ಬರುತ್ತವೆ. ಆದುದರಿಂದ ಅವರ ಮುಂದೆ ಹೋದರೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆ. ಇದನ್ನೂ ಕೂಡ ತಾವು ಪರಿಶೀಲಿಸಬೇಕು.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಈಗ ಏನು ಸಲಹೆ ಮಾಡಿದ್ದಾರೆ, ಅದರ ಬಗ್ಗೆಯೂ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಮತ್ತೆ ಮಧ್ಯಾಹ್ನ 3 ಗಂಟೆಗೆ ಪುನರ್ ಸಮಾವೇಶಗೊಳ್ಳುತ್ತದೆ.

(ಸದನವು ವಿರಾಮಕ್ಕಾಗಿ 2-05 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)

(ಸದನವು ಪುನಃ ಮಧ್ಯಾಹ್ನ 3.20ಕ್ಕೆ ಸಮಾವೇಶಗೊಂಡಿತು)

ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್) ಅವರು ಪೀಠವನ್ನು ಅಲಂಕರಿಸಿದರು

5. ನಿಲುವಳಿ ಸೂಚನೆ

ಅಧ್ಯಕ್ಷರು: ರಾಜ್ಯದಲ್ಲಿ ಬೆಳೆ ಹಾನಿಯಾಗಿರುವ ಬಗ್ಗೆ ಜಂಟಿ ಸದನ ಸಮಿತಿಯು ಕೊಟ್ಟಿರುವ ಮಧ್ಯಂತರ ವರದಿಯ ಬಗ್ಗೆ ಈಗ ಪ್ರಸ್ತಾಪ ಮಾಡುತ್ತಾರೆ.

ರಾಜ್ಯದಲ್ಲಿ ಬೆಳೆ ಹಾನಿಯಾಗಿರುವ ಬಗ್ಗೆ ಜಂಟಿ ಸದನ ಸಮಿತಿಯು ಕೊಟ್ಟಿರುವ ಮಧ್ಯಂತರ ವರದಿಯ ಬಗ್ಗೆ ಪ್ರಸ್ತಾಪ: (ಅನುಮತಿ ಕೋರಿ ಚರ್ಚೆ)

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆಯನ್ನು ಪಡೆದು ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ. ಜಂಟಿ ಸದನ ಸಮಿತಿಯು ಇಡೀ ರಾಜ್ಯದಲ್ಲಿ ಅಡ್ಡಾಡಿ ವರದಿಯನ್ನು ಕೊಡಬೇಕು ಎನ್ನತಕ್ಕಂಥಾದ್ದು ತೀರ್ಮಾನವಾಗಿತ್ತು. ಆದರೆ ಕಾರಣಾಂತರಗಳಿಂದ ಅಂದರೆ